# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 573 |
| ಸದಸ್ಯರ ಹೆಸರು | : | ಶ್ರೀ ಟಿ.ಎನ್. ಜವರಾಯಿಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.12.2024 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮಗಳಲ್ಲಿರುವ ಗ್ರಾಮಠಾಣ, ಊರುಗುಪ್ಪೆ ಸರ್ವೆ ನಂಬರ್‌ನಲ್ಲಿ ಅನಾಧಿ ಕಾಲದಿಂದಲೂ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ನಿವಾಸಿಗಳಿಗೆ ನಮೂನೆ 9 ಮತ್ತು 11ನೇ ಬಿ-ನಮೂನೆ ವಿತರಿಸದೆ ಸಾರ್ವಜನಿಕ ಗ್ರಾಮ ಪಂಚಾಯಿತಿ ಪಿ.ಡಿ.ಓ.ಗಳು ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; | ಬಂದಿಲ್ಲ. |
| (ಆ) | ಅನಾದಿ ಕಾಲದಿಂದಲೂ ಗ್ರಾಮಗಳಲ್ಲಿ ಗ್ರಾಮಠಾಣ, ಊರುಗುಪ್ಪೆ ಸರ್ವೆ ನಂಬರ್‌ನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ನಿವಾಸಿಗಳಿಗೆ ಕೊಡಗು ಮತ್ತು ಇತರೆ ಜಿಲ್ಲೆಗಳಲ್ಲಿ ನಮೂನೆ 9 ಮತ್ತು 11ನೇ ಬಿ-ನಮೂನೆಗೆ ಅರ್ಜಿ ಸಲ್ಲಿಸಿದರೆ ಪಿ.ಡಿ.ಓ.ಗಳು ಆರ್.ಟಿ.ಸಿ. ಕೊಡಿ, ಮನೆ ಕಟ್ಟಿರುವ ಜಾಗವನ್ನು ಭೂ ಪರಿರ್ತನೆ ಮಾಡಿಕೊಂಡು ಬನ್ನಿ ಎಂದು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಾರ್ವಜನಿಕರ ಅನುಕೂಲಕ್ಕಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸರ್ಕಾರದ ಆದೇಶ/ ಸುತ್ತೋಲೆಗಳಿದ್ದರೆ ಅದರ ಪ್ರತಿ ಒದಗಿಸುವುದರೊಂದಿಗೆ ವಿವರವಾದ ಮಾಹಿತಿ ನೀಡುವುದು; | ಬಂದಿಲ್ಲ, ಆದಾಗ್ಯೂ ಊರುಗುಪ್ಪೆ, ಸರ್ವೆ ನಂಬರ್‌ನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವವರಿಗೆ ಕಂದಾಯ ಇಲಾಖೆಯ ಹಕ್ಕು ಪತ್ರಗಳನ್ವಯ ನಮೂನೆ-9 ಮತ್ತು 11ಎ ಗಳನ್ನು ವಿತರಿಸಲು ಕ್ರಮ ವಹಿಸಲಾಗುವುದು. |
| (ಇ) | ನಮೂನೆ 9 ಮತ್ತು 11ನೇ ಬಿ ನಮೂನೆ ವಿತರಿಸದೆ ಸಾರ್ವಜನಿಕರಿಗೆ ಗ್ರಾಮ ಪಂಚಾಯಿತಿ ಪಿ.ಡಿ.ಓ.ಗಳು ಲಂಚಕ್ಕಾಗಿ ಪೀಡಿಸುತ್ತಿದ್ದು, ಇಂತಹ ಅಧಿಕಾರಿ/ ನೌಕರರ ಮೇಲೆ ಸರ್ಕಾರ ಇಲ್ಲಿಯವರೆಗೂ ತೆಗೆದುಕೊಂಡಿರುವ ಕಠಿಣ ರೀತಿಯ ಕ್ರಮಗಳೇನು; (ವಿವರ ನೀಡುವುದು) | ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. |
| (ಈ) | ರಾಜ್ಯದ ಗ್ರಾಮಗಳಲ್ಲಿರುವ ಗ್ರಾಮಠಾಣ, ಊರುಗುಪ್ಪೆ ಸರ್ವೆ ನಂಬರ್‌ನಲ್ಲಿ ಅನಾಧಿ ಕಾಲದಿಂದಲೂ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ನಿವಾಸಿಗಳಿಗೆ ಈ ಗೊಂದಲಗಳನ್ನು ನಿವಾರಿಸಿ, ನಮೂನೆ 9 ಮತ್ತು 11ನೇ ಬಿ-ನಮೂನೆ ಬ್ಯಾಂಕುಗಳಿಗೆ ಕೊಡಲು, ಪೌತಿ ಖಾತೆ ಹೀಗೆ ಇನ್ನಿತರೆ ದಾಖಲೆಗಳಿಗೆ ನೀಡಲು ಬೇಕಾಗಿರುವುದರಿಂದ ಈ ನಮೂನೆಯನ್ನು ವಿತರಿಸಲು ಸರ್ಕಾರ ಕೂಡಲೇ ಆದೇಶ ಹೊರಡಿಸುವುದೇ? (ವಿವರ ನೀಡುವುದು) | ಪರಿಶೀಲಿಸಲಾಗುವುದು. |

ಸಂಖ್ಯೆ: ಗ್ರಾಅಪ 659 ಗ್ರಾಪಂಅ 2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.